1	2	3	4	5
9.	Mandya	2.41	0.91	12.17
10.	Mysore	48.44	47.68	24.35
11.	Shimoga	0.01	4.23	2.00
12.	Tumkur	48.31	67.84	59.59
	Total	1118.19	1206.92	1478.43
	North Zone			
1.	Belgaum	10.35	10.56	10.89
2.	Bellary	1.61	8.02	0.12
3.	Bijapur	0.00	0.00	2.29
4.	Chitradurga	4.24	3.32	3.50
5.	Dharwar	0.68	2.16	0.00
6.	Gulbarga	0.10	3.52	0.00
7.	Hospet	1.33	1.28	9.61
8.	Ilkal	569.89	563.08	230.61
9.	Koppal	489.02	490.11	608.43
10.	Sedam	0.00	5.40	0.00
11.	U.K.	0.92	2.10	0.00
12.	Head Office	0.00	0.00	0.00
	Total	1078.14	1089.55	865.45
	Grand Total	2196.33	2296.47	2343.88

ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳಿಗೆ ಕೊಡಬೇಕಾಗಿರುವ ಸಬ್ಸಿಡಿ ಹಣ

276 (582): ಶ್ರೀ ಸಿಂಧ್ಯ ಪಿ.ಜಿ.ಆರ್. (ಕನಕಪುರ) ಮಾನ್ಯ ಕಾರ್ಮಿಕ, ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳಿಗೆ ಸರ್ಕಾರದಿಂದ ಕೊಡಬೇಕಾಗಿರುವ ಸಬ್ಸಿಡಿ ಹಣ ಎಷ್ಟು; ಮತ್ತು ಅವುಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರಗಳನ್ನು ಕೊಡುವುದು);

ಆ) ಕಳೆದ 3 ವರ್ಷಗಳಲ್ಲಿ ಬಿಡುಗಡೆ ಮಾಡಿರುವ ಸಬ್ಸಿಡಿ ಹಣ ಎಷ್ಟು;

ಇ) ಬಾಕಿ ಹಣವನ್ನು ಬಿಡುಗಡೆ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ವಿವರಗಳನ್ನು ಕೊಡುವುದು)?

ಶ್ರೀ ಖಮರುಲ್ ಇಸ್ಲಾಂ (ಕಾರ್ಮಿಕ ಸಣ್ಣ ಪ್ರಮಾಣದ ಕೈಗಾರಿಕೆ ಮತ್ತು ಹಜ್ ಸಚಿವರು): ಅ) 31-03-2003 ರವರೆಗೆ 18,279 ಸಣ್ಣ ಕೈಗಾರಿಕೆಗಳಿಗೆ ಒಟ್ಟು ರೂ. 40567.36 ಲಕ್ಷಗಳ ಸಹಾಯಧನ ಬಿಡುಗಡೆ ಬಾಕಿ ಇರುತ್ತದೆ. ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ.

ಆ) ಕಳೆದ 3 ವರ್ಷಗಳಲ್ಲಿ ಬಿಡುಗಡೆ ಮಾಡಲಾದ ಸಹಾಯ ಧನ ವಿವರ ಈ ಕೆಳಕಂಡಂತಿದೆ.

ವರ್ಷ	ಘಟಕಗಳ ಸಂಖ್ಯೆ	ಬಿಡುಗಡೆ ಮಾಡಿರುವ ಸಹಾಯಧನದ ಮೊತ್ತ (ರೂ. ಲಕ್ಷಗಳಲ್ಲಿ)
2000–01	369	542.87
2001–02	2507	3457.14
2002–03	308	501.51
ಒಟ್ಟು	3184	4501.52

ಇ) ದಿನಾಂಕ:1.1.1999ರಿಂದ 31.03.2003ರ ಅವಧಿಯಲ್ಲಿ ಒಟ್ಟು 18279 ಸಣ್ಣ ಕೈಗಾರಿಕಾ ಘಟಕಗಳಿಗೆ ಸಹಾಯಧನ ಮಂಜೂರು ಮಾಡಲಾಗಿದ್ದು ರೂ. 405.67 ಕೋಟಿಗಳನ್ನು ಬಿಡುಗಡೆ ಮಾಡಬೇಕಾಗಿದೆ. ಆಯವ್ಯಯದ ಕೊರತೆಯಿಂದಾಗಿ ಪ್ರತಿ ವರ್ಷವು ಮಂಜೂರು ಮಾಡಲಾಗುತ್ತಿದ್ದ ಸಹಾಯಧನವನ್ನು ಸಕಾಲದಲ್ಲಿ ಬಿಡುಗಡೆ ಮಾಡಲು ಸಾಧ್ಯವಾಗುತ್ತಿಲ್ಲ. ಸಹಾಯಧನ ಬಿಡುಗಡೆಗಾಗಿ ಅಗತ್ಯ ಮೊತ್ತವನ್ನು "ಕೆ.ಎಸ್.ಎಫ್.ಸಿ. ಬಾಂಡ್" ಗಳ ಮುಖಾಂತರ ಕ್ರೋಢೀಕರಿಸುವ ಕ್ರಮ ಕೈಗೊಳ್ಳಲಾಗುತ್ತಿದೆ ಹಾಗೂ ತದನಂತರ, ಮಂಜೂರು ಮಾಡಲ್ಪಟ್ಟ ಘಟಕಗಳಿಗೆ ಅವುಗಳಿಗೆ ಮಂಜೂರಾತಿ ಪಡೆದ ದಿನಾಂಕದ ಜೇಷ್ಟತೆ ಆಧಾರದ ಮೇಲೆ ಬಿಡುಗಡೆ ಮಾಡಲಾಗುವುದು.

Districtwise details of State investment subsidy pendency as on March

Sl.No	Name of the District	Total No. of units	Amount
1.	Bangalore(U)	1349	6353.38
2.	Bangalore(R)	1750	5196.87
3.	Bagalkot	401	715.87
4.	Belgaum	1448	1955.27
5.	Bellary	602	1557.28
6.	Bidar	554	521.25
7.	Bijapur	503	779.11
8.	Chamarajnagar	223	266.93
9.	Chitradurga	411	806.05
10.	Chickmagalur	281	427.53
11.	Davanagere	302	678.24
12.	Dharwad	704	1518.14
13.	D.K.	874	1787.23

1	2	3	4
14.	Gadag	320	333.59
15.	Gulbarga	429	1028.54
16.	Hassan	576	844.57
17.	Haveri	237	286.00
18.	Karwar	1154	1809.27
19.	Kodagu	150	378.03
20.	Kolar	1625	3662.06
21.	Koppal	235	985.35
22.	Mandya	401	576.81
23.	Mysore	913	2452.00
24.	Raichur	242	616.61
25.	Shimoga	421	695.91
26.	Tumkur	1269	2681.62
27.	Udupi	905	1653.75
	Total	18279	40567.36

ಬೆಂಗಳೂರು ನಗರದಲ್ಲಿ ಬಿಕ್ಷುಕರ ಸಂಖ್ಯೆಯ ಹೆಚ್ಚಳ

277 (585): ಶ್ರೀ ಸುಬ್ಬಾರೆಡ್ಡಿ ಕೆ.ಎಸ್. (ಬಸವನಗುಡಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಭಿಕ್ಷುಕರ ಸಂಖ್ಯೆ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಭಿಕ್ಷಾಟನೆ ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಹೌದು.

ಆ) 1. ಕರ್ನಾಟಕ ಪೊಲೀಸ್ ಹಾಗೂ ಬೆಂಗಳೂರು ನಿರಾಶ್ರಿತರ ಪರಿಹಾರ ಕೇಂದ್ರದ ಕಾರ್ಯಪಾಲಕ ಸಿಬ್ಬಂದಿಯವರು ಬೆಂಗಳೂರು ನಗರದಲ್ಲಿ ಭಿಕ್ಷಾಟನೆಯಲ್ಲಿ ತೊಡಗಿರುವವರನ್ನು ಕರ್ನಾಟಕ ಭಿಕ್ಷಾಟನಾ ನಿಷೇಧ ಅಧಿನಿಯಮ 1975 ರನ್ವಯ ಬಂಧಿಸಿ ನಿರಾಶ್ರಿತರ ಪರಿಹಾರ ಕೇಂದ್ರ ಮಾಗಡಿ ರಸ್ತೆ, ಬೆಂಗಳೂರು, ಇಲ್ಲಿ ಇರಿಸಲಾಗುತ್ತಿದೆ. ವಾರದಲ್ಲಿ ಕನಿಷ್ಠ ನಾಲ್ಕು ದಿವಸ ಇಂತಹ ಬಂಧನಗಳನ್ನು ಮಾಡಲಾಗುತ್ತಿದೆ.

2. ಭಿಕ್ಷಾಟನೆಗೆ ಉತ್ತೇಜನ ನೀಡಬಾರದು ಎಂಬುದರ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಸಲುವಾಗಿ ಕರಪತ್ರಗಳನ್ನು ಹಂಚಲಾಗುತ್ತಿದೆ.